ಬೆಂಗಳೂರಿನಲ್ಲಿರುವ ಕೌಟುಂಬಿಕ ನ್ಯಾಯಾಲಯದ ಸ್ಥಳಾಂತರ.

೨೧೫೧(೨೮೮೦)

ಶ್ರೀ ಪ್ರಕಾಶ್ ಖಂಡ್ರೆ(ಬಾಲ್ಕಿ): ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕೌಟುಂಬಿಕ ನ್ಯಾಯಾಲಯದಲ್ಲಿ ಇರುವ ಪೀಠಗಳೆಷ್ಟು?

ಆ) ಈ ಕೌಟುಂಬಿಕ ನ್ಯಾಯಾಲಯದಲ್ಲಿ ಕಳೆದ ೩ ವರ್ಷಗಳಿಂದ ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ, ಈ ಪ್ರಕರಣದ ವಿವರಗಳೇನು?

ಇ) ಕಳೆದ ೧ ವರ್ಷದಿಂದ ಇಲ್ಲಿಯವರೆಗೆ ಈ ನ್ಯಾಯಾಲಯವನ್ನು ೫ ಬಾರಿ ಒಂದು ಕಡೆಯಿಂದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರ ಮಾಡಿರುವುದು ನಿಜವಲ್ಲವೇ?

ಈ) ಈ ಕೌಟುಂಬಿಕ ನ್ಯಾಯಾಲಯವು ಸೆಲ್ಲಾರ್‌ನಲ್ಲಿ ಇಕ್ಕಟ್ಟಾದ ಸ್ಥಳದಲ್ಲಿ ಗಾಳಿ ಬೆಳಕುಗಳ ಕೊರತೆಯಲ್ಲಿ ಕಾರ್ಯ ನಿರ್ವಸಿಸುತ್ತಿರುವುದು ನಿಜವಲ್ಲವೇ?

ಉ) ಈ ಕೌಟುಂಬಿಕ ನ್ಯಾಯಾಲಯದಲ್ಲಿ ಕಕ್ಷಿದಾರರು, ವಕೀಲರು ಕುಳಿತುಕೊಳ್ಳುವುದಕ್ಕೆ ಹಾಗೂ ನಿಂತು ಕೊಳ್ಳುವುದಕ್ಕೆ ಸ್ಥಳವಿಲ್ಲದೇ ಇರುವುದು ನಿಜವಲ್ಲವೇ?

ಊ) ಈ ಕೌಟುಂಬಿಕ ನ್ಯಾಯಾಲಯಕ್ಕೆ ಬರುವ ಕಕ್ಷಿದಾರರಿಗೆ ವಿಶೇಷವಾಗಿ ಶೇಕಡ ೯೯ ರಷ್ಟು ಮಹಿಳೆಯರು ಬರುವುದರಿಂದ ಅವರುಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಹಾಗೂ ಶೌಚಾಲಯಗಳ ಕೊರತೆ ಇರುವುದು ನಿಜವಲ್ಲವೇ?

ಋ) ಹಾಗಿದ್ದಲ್ಲಿ ಈ ಕೌಟುಂಬಿಕ ನ್ಯಾಯಾಲಯವನ್ನು ಈಗಿರುವ ಇಕ್ಕಟ್ಟಾದ ಸ್ಥಳದಿಂದ (ಸೆಲ್ಲಾರ್‌ನಿಂದ) ವಿಶಾಲವಾದ ಕೋರ್ಟ್ ಹಾಲ್‌ಗೆ ವರ್ಗಾಯಿಸುವುದಲ್ಲದೇ ಇಲ್ಲಿಗೆ ಬರುವ ಕಕ್ಷಿದಾರರಿಗೆ ಹಾಗೂ ವಕೀಲರಿಗೆ ಹಾಗೂ ಇಲ್ಲಿ ಕೆಲಸ ಮಾಡುವ ಸಿಬ್ಬಂದಿ ವರ್ಗದವರಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗುವುದೇ?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಗಳ ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಂದು ಪ್ರಧಾನ ಕುಟುಂಬ ನ್ಯಾಯಾಲಯ ಮತ್ತು

ಮೂರು ಹೆಚ್ಚುವರಿ ಕುಟುಂಬ ನ್ಯಾಯಾಲಯಗಳು ಇವೆ.

ಆ) ಈ ನ್ಯಾಯಾಲಯಗಳಲ್ಲಿ ಕಳೆದ ೩ ವರ್ಷಗಳಲ್ಲಿ ಒಟ್ಟು ೬,೪೨೮ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅವುಗಳ ವಿವರಗಳು ಈ ಕೆಳಕಾಣಿಸಿದಂತೆ ಇವೆ:

| ವರ್ಷ | ಸಿವಿಲ್ | ಕ್ರಿಮಿನಲ್ |
|---|---|---|
| ೧೯೯೭ | ೧೬೬೯ | ೫೭೩ |
| ೧೯೯೮ | ೧೫೦೩ | ೪೦೭ |
| ೧೯೯೯ | ೧೭೪೪ | ೪೪೪ |
| ಒಟ್ಟು | ೪೯೬೦ | ೧೪೬೪ |

ಇ) ನಿಜವಲ್ಲ. ಈ ಹಿಂದೆ ಶೆಡ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕುಟುಂಬ ನ್ಯಾಯಾಲಯಗಳನ್ನು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯಕ್ಕೆ ಸ್ಥಳಾಂತರಿಸಲಾಗಿದೆ.

ಈ) ನಿಜವಲ್ಲ. ಮೂರು ಕುಟುಂಬ ನ್ಯಾಯಾಲಯಗಳು ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯದ ನೆಲಮಹಡಿಯಲ್ಲಿ ಮತ್ತು ಇನ್ನೊಂದು ಕುಟುಂಬ ನ್ಯಾಯಾಲಯವು ಮೊದಲನೆಯ ಮಹಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಉ) ನಿಜವಲ್ಲ. ನ್ಯಾಯಾಲಯ ಕೊಠಡಿಗಳಲ್ಲಿ ಕುಳಿತು ಕೊಳ್ಳಲು ಹಾಗೂ ನಿಂತುಕೊಳ್ಳುವುದಕ್ಕೆ ಸ್ಥಳಾವಕಾಶವನ್ನು ಏರ್ಪಡಿಸಲಾಗಿದೆ.

ಊ) ಕೊರತೆ ಇರುವುದು ನಿಜವಲ್ಲ. ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯಗಳಲ್ಲಿ ಶೌಚಾಲಯ ಮತ್ತು ನೀರಿನ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಋ) ಈ ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರದ ಕಾರಣ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ರಾಜ್ಯ ನಿರ್ಮಾಣ ನಿಗಮದಲ್ಲಿನ ಅವ್ಯವಹಾರಗಳು.